**ಅಸಲು ದಾವಾ ಸಂಖ್ಯೆ - 115/2023** **ಡಿ.ಡಬ್ಲ್ಯೂ:-1**

ದಿನಾಂಕಃ 16.12.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- 9 ನೇ ಪ್ರತಿವಾದಿ ಪರ ವಕೀಲರಿಂದ :-**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಕುಟುಂಬದ ಮೂಲ ಪುರುಷ ನನ್ನ ಅಜ್ಜ ಕುಂಟ ಹನುಮಂತಪ್ಪ. ನನ್ನ ಅಜ್ಜಿಯ ಹೆಸರು ಸಣ್ಣರಂಗಮ್ಮ. ನಮ್ಮ ಅಜ್ಜನಿಗೆ ಒಟ್ಟು 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಅಂದರೆ ಶೇಷಗಿರಿಯಪ್ಪ, ಹನುಮಂತಮ್ಮ, ಹನುಮಂತಪ್ಪ, ಗಂಗಮ್ಮ, ಸಿದ್ದಪ್ಪ ಮತ್ತು ಲೀಲಮ್ಮ. ನಮ್ಮ ತಂದೆ ಈಗ್ಗೆ ಸುಮಾರು 4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಜೀವಿತ ಕಾಲದಲ್ಲಿ ಕುಟುಂಬದ ಎಲ್ಲಾ ವ್ಯವಹಾರಗಳನ್ನು ತಾವೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆ ಈಗ್ಗೆ ಸುಮಾರು 25 ವರ್ಷಗಳ ಹಿಂದೆ ಒಟ್ಟು ಕುಟುಂಬದಿಂದ ಬೇರೆಯಾಗಿ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜ ಕುಂಟ ಹನುಮತಂಪ್ಪ ನಾನು ಚಿಕ್ಕ ವಯಸ್ಸಿನಲ್ಲಿರುವಾಗ ತೀರಿಕೊಂಡಿರುತ್ತಾರೆ.ಸರ್ವೇ ನಂ.74 ರಲ್ಲಿ ನಮ್ಮ ಅಜ್ಜ ಜೀವಿತ ಕಾಲದಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡಿದ್ದರು ಮತ್ತು ಇನ್ನು 1 ಎಕರೆ ಜಮೀನನ್ನು ನನ್ನ ತಾಯಿಯ ತಂದೆಯವರು ನನ್ನ ಅಜ್ಜನ ಹೆಸರಿಗೆ ಖರೀದಿ ಮಾಡಿಕೊಟ್ಟಿದ್ದರು. ಸರ್ವೇ ನಂ.74 ರಲ್ಲಿ 2 ಎಕರ ಜಮೀನನ್ನು ನನ್ನ ಅಜ್ಜ ಖರೀದಿ ಮಾಡಿದ ಬಗ್ಗೆ ಮತ್ತು 1 ಎಕರೆ ಜಮೀನನ್ನು ನನ್ನ ತಾಯಿಯ ತಂದೆ ನನ್ನ ಅಜ್ಜನ ಹೆಸರಿಗೆ ಖರೀದಿ ಮಾಡಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಅಜ್ಜನ ತಂದೆಯ ಹೆಸರು ಶೇಷಗಿರಿಯಪ್ಪ ಇರಬಹುದು. ದಾವಾ ಐಟಂ ನಂ.1 ರ ಆಸ್ತಿಯು ನಮ್ಮ ಅಜ್ಜನ ಹೆಸರಿನಿಂದ ನಮ್ಮ ತಂದೆಯ ಹೆಸರಿಗೆ ಪೌತಿ ಖಾತೆಯ ಆಧಾರದ ಮೇಲೆ ಬಂದಿರುತ್ತದೆ

ಎಂದರೆ ಸರಿಯಲ್ಲ. ನನ್ನ ಅಜ್ಜಿ ರಂಗಮ್ಮ, 7 ನೇ ಪ್ರತಿವಾದಿಯ ಗಂಡ ಮುದ್ದ ಹನುಮಂತಪ್ಪ, ವಾದಿ ಸಿದ್ದಪ್ಪರವರು ಒಟ್ಟು ಕುಟುಂಬದಲ್ಲಿದ್ದು ಹಿರಿಯ ಮಗ ಶೇಷಗಿರಿಯಪ್ಪನ ಹೆಸರಿಗೆ ದಾವಾ ಐಟಂ ನಂ.1 ರ ಆಸ್ತಿಯನ್ನು ಖಾತೆ ಮಾಡಲಾಗಿ ಎಂದು ನಮೂದಾಗಿದೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು 3 ನೇ ಪ್ರತಿವಾದಿ ಹೇಳಿ ನಮೂದು ಮಾಡಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳಿಗೆ ಮಾಹಿತಿಯನ್ನು 3 ನೇ ಪ್ರತಿವಾದಿ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಮ್ಮ ಅಜ್ಜನ ಕುಟುಂಬ ಈಗಲೂ ಒಟ್ಟು ಕುಟುಂಬದ ಸದಸ್ಯರ ಅಸ್ತಿತ್ವದಲ್ಲಿದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಅಣ್ಣ ತಮ್ಮಂದಿರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಈಗಲೂ ಒಟ್ಟು ಕುಟುಂಬದ ಸದಸ್ಯರ ಅಸ್ತಿತ್ವದಲ್ಲಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.